**ದಿನಾಂಕಃ 21-06-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ- ಶ್ರೀ. ಎಸ್.ವಿ.** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಚನ್ನೇಗೌಡ ನನಗೆ ಗೊತ್ತು. ನಾವು ನಮ್ಮ ಆಸ್ತಿಗಳನ್ನು ಭಾಗ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ಆಸ್ತಿಗೆ ಸಂಬಂಧಿಸಿದಂತೆ ನಮ್ಮ ಕುಟುಂಬದಲ್ಲಿ ಭಾಗಾಂಶದ ದಾವೆ ನಡೆಯುತ್ತಿದೆ ಎಂದರೆ ಸರಿ. ನಿಮ್ಮ ಕುಟುಂಬದ ಒಬ್ಬರು ಹೆಚ್ಚು ಆಸ್ತಿಯನ್ನು, ಮತ್ತೊಬ್ಬರು ಕಡಿಮೆ ಆಸ್ತಿಯನ್ನು ಅನುಭೋಗ ಮಾಡಿಕೊಂಡು ಬರುತ್ತಿದ್ದೀರಿ ಎಂದರೆ ಸಾಕ್ಷಿ ನಾವು ಭಾಗವನ್ನು ಮಾಡಿಕೊಂಡಿಲ್ಲವೆಂದು ನುಡಿಯುತ್ತಾರೆ. ನೀವು ಎಷ್ಟು ಆಸ್ತಿಯಲ್ಲಿ ಉಳುಮೆ ಮಾಡುತ್ತಿದ್ದೀರಿ ಎಂದರೆ ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನೀವು ಆಸ್ತಿಯನ್ನು ಹೆಚ್ಚು ಅನುಭೋಗ ಮಾಡುತ್ತಿದ್ದೀರಿ, ಆಗಾಗಿ ಅದನ್ನು ಆರೋಪಿ ಕೇಳಿದ್ದಕ್ಕೆ ನೀವು ಸುಳ್ಳು ಪಿರ್ಯಾದು ನೀಡಿರುತ್ತೀರಿ ಎಂದರೆ ಸರಿಯಲ್ಲ. ನೀವು ನೀಡಿದ ಪಿರ್ಯಾದಿಯಲ್ಲಿ ಯಾವುದೇ ಸತ್ಯಾಂಶವಿಲ್ಲವೆಂದು ಕುದೂರು ಪೋಲಿಸರು ಬಿ ರಿಪೋರ್ಟ್ ಹಾಕಿರುತ್ತಾರೆಂದರೆ ಸಾಕ್ಷಿ ಸರಿ, ಸಾಕ್ಷಿ ಮುಂದುವರೆದು ಗಲಾಟೆಯಾಗಿರುವುದು ಸತ್ಯವೆಂದು ನುಡಿಯುತ್ತಾರೆ. ಯಾವ ದಿನಾಂಕ ಗಲಾಟೆಯಾಗಿರುತ್ತದೆಂದರೆ ಸಾಕ್ಷಿ ಸುಮಾರು 10 ವರ್ಷಗಳ ಹಿಂದೆ ಗಲಾಟೆಯಾಗಿದ್ದು, ನನಗೆ ದಿನಾಂಕ ನೆನಪಿಲ್ಲವೆಂದು ನುಡಿಯುತ್ತಾರೆ. ಗಲಾಟೆಯಾದ 3 ದಿನಗಳ ನಂತರ ನಾನು ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ.

2. ದೂರನ್ನು ನೀಡುವಾಗ ನಾನು ಗಾಯದ ಪ್ರಮಾಣಪತ್ರ, ನನಗೆ ಗಾಯವಾಗಿದ್ದ ಪೋಟೋವನ್ನು ನೀಡಿರುತ್ತೇನೆ. ನೀವು 3 ದಿನಗಳ ನಂತರ ದೂರನ್ನು ದಾಖಲಿಸಿರುತ್ತೀರಿ, ಆದರೆ ಗಲಾಟೆಯಾಗಿದ್ದರೆ, ಆ ದಿನವೇ ಹೋಗಿ ದೂರನ್ನು ನೀಡುತ್ತಿದ್ದೀರಿ ಎಂದರೆ ಸಾಕ್ಷಿ ನನಗೆ ಹುಷಾರಿಲಿಲ್ಲ, ನನ್ನ ಮಗನೂ ಸಹ ಇರಲಿಲ್ಲ, ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡು ನಂತರ ದೂರನ್ನು ನೀಡಿರುತ್ತೇನೆಂದು ನುಡಿಯುತ್ತಾರೆ. ನನ್ನ ಮಗ

ಗಲಾಟೆಯಾದ 2 ದಿನಗಳ ನಂತರ ಮನೆಗೆ ಬಂದು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ಆ ದಿನ ಚಿಕಿತ್ಸೆ ಪಡೆದ ಗಾಯದ ಪ್ರಮಾಣಪತ್ರವನ್ನು ಠಾಣೆಯಲ್ಲಿ ನೀಡಿರುತ್ತೇನೆ. ನನ್ನ ಮಗ ಬರುವವರೆಗೂ ನನಗೆ ಹೊರಗಡೆ ಹೋಗಲು ಆಗಿರುವುದಿಲ್ಲ ಎಂದರೆ ಸರಿ. ನೀವು ನೀಡಿರುವ ದೂರು ಸುಳ್ಳು, ನೀವು ಪಿರ್ಯಾದಿಗೆ ತೊಂದರೆ ಮಾಡುವ ಉದ್ದೇಶವನ್ನಿಂಟುಕೊಂಡು, ಅವರು ಪೋಲಿಸ್ ಇಲಾಖೆಯಲ್ಲಿರುವುದರಿಂದ ಅವರಿಗೆ ತೊಂದರೆ ನೀಡಲು ಸುಳ್ಳು ದೂರನ್ನು ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪೋಲಿಸರು ಬಿ ರಿಪೋರ್ಟ್ ಹಾಕುವ ಮುಂಚೆ, ನಿಮ್ಮನ್ನು ಮತ್ತು ಆರೋಪಿಯನ್ನು ಕರೆಯಿಸಿ ವಿಚಾರಣೆ ಮಾಡಿ ಬಿ ರಿಪೋರ್ಟ್ ಹಾಕಿರುತ್ತಾರೆಂದರೆ ಸಾಕ್ಷಿ ನನ್ನನ್ನು ಪೋಲಿಸರು ವಿಚಾರಣೆ ಮಾಡಿರುವುದಿಲ್ಲವೆಂದು ನುಡಿಯುತ್ತಾರೆ.

3. ದಿನಾಂಕ: 14-11-2012 ರಂದು ಪೋಲಿಸರು ನಿಮ್ಮ ಮನೆಯ ಹತ್ತಿರ ಬಂದು, ನೋಟಿಸ್ ನೀಡಲು ಪ್ರಯತ್ನಿಸಿದರೂ ಸಹ ನೀವು ಅದನ್ನು ಸ್ವೀಕರಿಸದೇ, ತಿರಸ್ಕರಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಠಾಣೆಗೆ ಹೋಗಿ ನೀವು ನೀಡಿರುವ ಸುಳ್ಳು ದೂರನ್ನು ಸಾಬಿತು ಪಡಿಸಲು ಸಾಧ್ಯವಾಗದ ಕಾರಣ ನೀವು ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಗಲಾಟೆಯಲ್ಲಿ ಪೆಟ್ಟು ಬಿದ್ದರೆ ತಕ್ಷಣವೇ ಆಸ್ಪತ್ರೆಗೆ ಹೋಗುತ್ತಾರೆಂದರೆ ಸಾಕ್ಷಿ ನಾನು ಪೆಟ್ಟಾದಾಗ 2 ದಿನ ಆಸ್ಪತ್ರೆಗೆ ದಾಖಲಾಗಿರುತ್ತೇನೆಂದು ನುಡಿಯುತ್ತಾರೆ. ಗಲಾಟೆಯಾದ ಮಾರನೇ ದಿವಸ ನನ್ನ ಮಗ ಬಂದು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಗಾಯದ ಪ್ರಮಾಣಪತ್ರವನ್ನು ಈ ಪ್ರಕರಣಗೋಸ್ಕರ ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಗಾಯದ ಪೋಟೋ ಇರುತ್ತದೆಂದು ನುಡಿಯುತ್ತಾರೆ. ಯಾವುದೇ ಗಲಾಟೆಯಾಗಿರುವುದಿಲ್ಲ, ಆರೋಪಿ ಸರ್ಕಾರಿ ಅಧಿಕಾರಿಯಾಗಿರುವುದರಿಂದ ಅವರ ಆಸ್ತಿಯನ್ನು ಲಪಟಾಯಿಸಲು ಸುಳ್ಳು ದೂರನ್ನು

**ಸಿ.ಸಿ. ಸಂಖ್ಯೆ: 595 / 2016**
**ಚಾಸಾ-01 / ಪ್ರಾಸಾ-01**

ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪೋಟೋಗಳನ್ನು ಈ ಪ್ರಕರಣಗೋಸ್ಕರ ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ.ನ್ಯಾ.ದಂ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.**